**ಸಾಕ್ಷಿಯನ್ನು ದಿಃ 05.08.2024 ರಂದು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.**

**ಪಾಟೀ ಸವಾಲುಃ 2 ನೇ ಎದುರುದಾರರ ಪರ ವಕೀಲರಿಂದಃ**

ಅಪಘಾತವನ್ನು ನಾನು ಕಣ್ಣಾರೆ ನೋಡಿರುವುದಿಲ್ಲ. ಅಪಘಾತದ ಬಗ್ಗೆ ಅಕ್ಕಪಕ್ಕದವರು ಮಾತನಾಡಿಕೊಳ್ಳುತ್ತಿದ್ದರು ಸಿ.ಸಿ. ಕ್ಯಾಮರಾ ತೆಗೆಸಿ ನೋಡಿ ಅಪಘಾತ ಆಗಿದೆ ಎಂದು ಹೇಳಿದಾಗ ಅಪಘಾತದ ಬಗ್ಗೆ ಗೊತ್ತಾಗಿರುತ್ತದೆ. ಸಿ.ಸಿ. ಟಿವಿ ಫುಟೇಜ್ ಅನ್ನು ಎಸ್.ಬಿ.ಐ ಬ್ಯಾಂಕ್ ನಲ್ಲಿ ನೋಡಿರುತ್ತೇನೆ. ನನ್ನ ಜೊತೆ ಇಲವಾಲ ಪೋಲೀಸರು ಬಂದಿದ್ದರು. ನನ್ನ ಯಜಮಾನರು ತೀರಿಹೋದ ಒಂದೂವರೆ ತಿಂಗಳ ನಂತರ ಸಿ.ಸಿ. ಟಿವಿ ಫುಟೇಜ್ ನೋಡಲು ಹೋಗಿರುತ್ತೇನೆ. ಸಿ.ಸಿ. ಟಿವಿ ಫುಟೇಜ್ ನಲ್ಲಿ ವಾಹನ ಸಂಖ್ಯೆ ಸ್ಪಷ್ಟವಾಗಿ ಕಾಣಿಸಿರುವುದಿಲ್ಲ ಎಂದರೆ ಸಾಕ್ಷಿಯು ಆಟೋ ಎಂದು ಕಾಣಿಸಿರುತ್ತದೆ ಮುಖ ಕಾಣಿಸಿರುವುದಿಲ್ಲ ಎಂದು ಉತ್ತರಿಸಿರುತ್ತಾರೆ. ಸಿ.ಸಿ. ಟಿವಿ ಫುಟೇಜ್ ನಲ್ಲಿ ಆಟೋ ಬಿಟ್ಟು ಬೇರೆ ಏನು ಕಾಣಿಸಿರುವುದಿಲ್ಲ ಎಂದರೆ ಸರಿ. ನನ್ನ ಯಜಮಾನರು ಅಪಘಾತದಲ್ಲಿ ತೀರಿಹೋಗಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಿಪಿ. 16 ರಲ್ಲಿ ನನ್ನ ಯಜಮಾನರು ಮಧ್ಯಪಾನ ಮಾಡಿ ಮೂರ್ಛೆ ಬಂದು ಬಿದ್ದಿರುತ್ತಾರೆ ಎಂದು ನಮೂದಾಗಿರುತ್ತದೆ ಎಂದರೆ ಸರಿಯಲ್ಲ. ನಿಪಿ. 16 ರಲ್ಲಿ ನಾನೇ ಮಾಹಿತಿ ನೀಡಿರುತ್ತೇನೆ ಎಂದರೆ ಸರಿಯಲ್ಲ. ಅದರಲ್ಲಿರುವ ದೂರವಾಣಿ ಸಂಖ್ಯೆ ನನ್ನದೇ. ನಿಪಿ. 16 ರಲ್ಲಿ ನನ್ನ ಯಜಮಾನರಿಗೆ ನಾನೇ ಆಸ್ಪತ್ರೆಗೆ ಕರೆದುಕೂಂಡು ಹೋಗಿರುತ್ತೇನೆ ಎಂದು ನಮೂದಾಗಿದೆ ಎಂದರೆ ಸರಿಯಲ್ಲ. ಸಂಜೆ 07.00 ಗಂಟೆಗೆ ಜೆ.ಎಸ್.ಎಸ್ ಆಸ್ಪತ್ರೆಗೆ ಹೋಗಿರುತ್ತೇನೆ. ದೂರುದಾರರಾದ ಸ್ವಾಮಿನಾಯಕ ನನ್ನ ಮಾವ ಇರುತ್ತಾರೆ. ದೂರಿನಲ್ಲಿ ನನ್ನ ಯಜಮಾನರು ಮೂರ್ಛೆ ಹೋಗಿ ಬಿದ್ದಿರುತ್ತಾರೆ ಎಂದು ಬರೆದಿರುತ್ತಾರೆ ಎಂದರೆ ಸಾಕ್ಷಿಯು ಠಾಣೆಯಲ್ಲಿ ಹಣ ಕೊಟ್ಟ ಆ ರೀತಿ ಬರೆಯಿಸಿರುತ್ತಾರೆ ಎಂದು ಉತ್ತರಿಸಿರುತ್ತಾರೆ. ಅಪಘಾತ ಆಗಿದೆ ಎಂದು ನಾನೇ ದೂರನ್ನು ದಾಖಲಿಸಿರುತ್ತೇನೆ. ಆಟೋ ಮಾಲೀಕರಾದ ಸರೋಜಮ್ಮ ಯಾರು ಎಂದು ಗೊತ್ತಿಲ್ಲ. ಆಟೋ ಚಾಲಕ ಪುಟ್ಟಸ್ವಾಮಿ ಯಾರು ಎಂದು ಗೊತ್ತಿಲ್ಲ. ಇದೇ ಆಟೋದಿಂದ ಅಪಘಾತ ಆಗಿದೆ ಪುಟ್ಟಸ್ವಾಮಿ ಯವರೇ ಆಟೋ ಚಾಲನ ಮಾಡುತ್ತಿದ್ದರು ಎಂದು ನಿಮಗೆ ಹೇಗೆ ಗೊತ್ತಾಯಿತು ಎಂದರೆ ಸಾಕ್ಷಿಯು ಸಿ.ಸಿ. ಟಿವಿ ಫುಟೇಜ್ ಅನ್ನು ಜೂಮ್ ಮಾಡಿ ನೋಡಿರುತ್ತೇನೆ ಎಂದು

ಉತ್ತರಿಸಿರುತ್ತಾರೆ. ಸಿ.ಸಿ. ಟಿವಿ ಫುಟೇಜ್ ನಲ್ಲಿ ವಾಹನ ಸಂಖ್ಯೆ, ವಾಹನ ಚಾಲಕ ಮತ್ತು ಬಿದ್ದ ವ್ಯಕ್ತಿ ಯಾರು ಎಂದು ಸ್ಪಷ್ಟವಾಗಿ ಕಾಣುತ್ತಿಲ್ಲ ಎಂದರೆ ಸರಿಯಲ್ಲ. ಪರಿಹಾರಕ್ಕಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಿ.ಸಿ. ಟಿವಿ ಫುಟೇಜ್ ನಲ್ಲಿ ಬಿದ್ದ ವ್ಯಕ್ತಿ ಸ್ಪಷ್ಟವಾಗಿ ಕಾಣಿಸದೇ ಇರುವ ಕಾರಣ ಸದರಿ ವ್ಯಕ್ತಿ ನನ್ನ ಯಜಮಾನರಲ್ಲ ಎಂದರೆ ಸರಿಯಲ್ಲ. ಪುಟ್ಟಸ್ವಾಮಿ, ಸರೋಜಮ್ಮ ಮತ್ತು ನಾನು ಪೋಲೀಸರ ಜೊತೆ ಶಾಮಿಲಾಗಿ ದಾಖಲೆಗಳನ್ನು ಸೃಷ್ಠಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ.

ಸಿ.ಸಿ. ಟಿವಿ ಫುಟೇಜ್ ನೋಡಿದ ತಕ್ಷಣ ಹೇಳಿಕೆ ತೆಗೆದುಕೊಳ್ಳುತ್ತೇವೆ ಎಂದು ಪೋಲೀಸರು ಹೇಳಿರುತ್ತಾರೆ. ನಾನು ಪೋಲೀಸರಿಗೆ ಹೇಳಿಕೆ ನೀಡಿರುವುದಿಲ್ಲ. ಪೋಲೀಸರು ನಾವು ನೋಡಿಕೊಳ್ಳುತ್ತೇವೆ ಎಂದು ಹೇಳಿರುತ್ತಾರೆ. ನಮಗೆ ಪರಿಹಾರ ಸಿಗಲಿ ಎಂದು ಪೋಲೀಸರು ಈ ಪ್ರಕರಣವನ್ನು ಸೃಷ್ಠಿಸಿರುತ್ತಾರೆ ಎಂದರೆ ಸರಿಯಲ್ಲ. ಅಪಘಾತ ನೋಡಿದವರು ಯಾರು ಎಂದು ನನಗೆ ಗೊತ್ತಿಲ್ಲ. ಅಪಘಾತ ಆದ ದಿನವೇ ನನ್ನ ಯಜಮಾನರು ಮೃತಪಟ್ಟಿರುತ್ತಾರೆ. ನನ್ನ ಯಜಮಾನರು ಅಪಘಾತದಿಂದ ತೀರಿಹೋಗಿರುವುದಿಲ್ಲ ಪರಿಹಾರಕ್ಕಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮೃತನ ಕೆಲಸ ಮತ್ತು ಸಂಪಾದನೆಯ ಬಗ್ಗೆ ದಾಖಲೆ ಹಾಜರು ಪಡಿಸಿರುವುದಿಲ್ಲ ಎಂದರೆ ಸರಿ. ನನ್ನ ಅತ್ತೆ ಮಾವ ನಮ್ಮ ಒಟ್ಟಿಗೆ ವಾಸವಾಗಿದ್ದಾರೆ. ನಿಪಿ. 12 ರಲ್ಲಿ ಕಾಣಿಸಿರುವ ಜನ್ಮ ದಿನಾಂಕ ಸರಿಯಾಗಿದೆ. ನನ್ನ ಅತ್ತೆ ಮಾವ ನಮ್ಮ ಒಟ್ಟಿಗೆ ವಾಸವಾಗಿದ್ದಾರೆ ಎಂದು ತೋರಿಸಲು ದಾಖಲೆ ಹಾಜರು ಪಡಿಸಿರುತ್ತೇನೆ. ಆ ಬಗ್ಗೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಇದು ಸುಳ್ಳು ಪ್ರಕರಣ ಆದ ಕಾರಣ ನಾವು ಪರಿಹಾರ ಪಡೆಯಲು ಅರ್ಹರಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ನನ್ನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ.

ಸಹಿ/-

ಹೆಚ್ಚುವರಿ ಲಘು ವ್ಯವಹಾರಗಳ ನ್ಯಾಯಾಧೀಶರು

ಮತ್ತು ಎಂ.ಎ.ಸಿ.ಟಿ., ಮೈಸೂರು.